ಚಿಕ್ಕಮಗಳೂರಿನ ಕೊಪ್ಪ ಜಿಲ್ಲೆಯವರಾದ ಸಂಪತ್ ಸಿರಿಮನೆ ಓದಿದ್ದು ಎಂಜಿನಿಯರಿಂಗ್. ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದವರು, ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡಬೇಕೆಂಬ ಉತ್ಸಾಹದಿಂದ ರಾಜೀನಾಮೆ ನೀಡಿದರು. ಈಗ ಸಿನಿಮಾ ಕೆಲಸದ ಜೊತೆಗೆ ಬರಹ ಲೋಕದ ಕೆಲಸವನ್ನೂ ಮಾಡುತ್ತಿದ್ದಾರೆ. ಓದು, ಬರಹ, ಸಂವಾದ, ಸಂಘಟನೆ ಅವರ ಪ್ರೀತಿಯ ವಿಷಯಗಳು.

ತಂದುಕೊಟ್ಟಿದ್ದರು. ಕಾರ್ ರೇಸು ಆಡುವಾಗ ಬಟನ್ನುಗಳ ಮೇಲೆ ದುಪ್ಪಟ್ಟು ಬಲ ಪ್ರಯೋಗಿಸಿದರೆ ಕಾರು ವೇಗವಾಗಿ ಹೋಗುತ್ತದೆಂದು ದಬಾಯಿಸಿ ಕುಟ್ಟಿ ಅದನ್ನು ಹಾಳು ಮಾಡಿದ್ದಾಯಿತು. ನಾನು ಬಟನ್ನನ್ನು ಕುಟ್ಟಿದಂತೆಯೇ ಅಪ್ಪ ನನ್ನನ್ನು ಕುಟ್ಟುತ್ತಾರೆ ಎಂಬ ಗಾಬರಿಗೆ ಅಪ್ಪ ಬರುವ ಮುಂಚೆಯೇ ಊಟ ಮಾಡಿ ಮಲಗಿಬಿಟ್ಟಿದ್ದೆ. ಮಾರನೆಯ ದಿನ ಅಪ್ಪ ಅದನ್ನು ಸರಿ ಮಾಡಿಸಿ ತಂದುಕೊಟ್ಟಾಗ ನನಗೆ ಅತೀವ ಅಚ್ಚರಿ. ಎಷ್ಟರವರೆಗೆ ಹಾಳಾದರೆ ರಿಪೇರಿ ಸಾಧ್ಯವಿದೆ ಎನ್ನುವ ನನ್ನ ನಂತರದ ಪ್ರಯೋಗದಲ್ಲಿ ವಿಡಿಯೋ ಗೇಮ್ ಯಾವುದಕ್ಕೂ ಉಪಯೋಗಕ್ಕೆ ಬಾರದೇ ಕಸದ ಬುಟ್ಟಿ ಸೇರಿದ್ದು ವಿಪರ್ಯಾಸವೇ. ಒಟ್ಟಿನಲ್ಲಿ ಒಮ್ಮೆ ಕೆಟ್ಟು ನಿಂತರೆ ಅದೇ ಅಂತ್ಯ ಎಂದು ತಿಳಿದಿದ್ದ ನನಗೆ ರಿಪೇರಿ ಎಂಬುದರ ಪರಿಚಯ ಆಗಿದ್ದು ಆಗಲೇ.

ರಿಪೇರಿಗಳು ಮನಸ್ಸುಗಳನ್ನು ಒಂದು ಮಾಡಬಹುದು, ಮನಸ್ಸುಗಳನ್ನು ಒಡೆಯಲೂಬಹುದು ಎಂದು ನನಗೆ ಅರ್ಥವಾಗಲು ಕೊಂಚ ಸಮಯ ಹಿಡಿಯಿತು. ನಮ್ಮೂರಿನಲ್ಲಿ 'ರುದ್ರಸ್ವಾಮಿ' ಎಂಬ ಒಂದು ಖಾಸಗಿ ಬಸ್ಸಿತ್ತು. ಅದಕ್ಕೆ ರವಿ ಎಂಬುವವನು ಚಾಲಕ, ಅವನೇ ಮಾಲೀಕ. ಮಲೆನಾಡಿನ ಕಾಡುಮೇಡಿನೊಳಗೆ ಪ್ರತಿದಿನ ನೂರೈವತ್ತು ಇನ್ನೂರು ಕಿಲೋಮೀಟರ್ ಸುತ್ತಾಡಿ ಬರುತ್ತಿದ್ದ 'ರುದ್ರಸ್ವಾಮಿ' ಬಹುತೇಕ ವಾರಕ್ಕೆ ಮರ್ನಾಲ್ಕು ಬಾರಿ ಕೈ ಕೊಡುತ್ತಿದ್ದ. ಆಗೆಲ್ಲಾ ರುದ್ರಸ್ವಾಮಿಯನ್ನು ಚೆಕಪ್ ಮಾಡುತ್ತಿದ್ದುದು ನಮ್ಮೂರಿನಲ್ಲಿ ಪ್ರಸಿದ್ಧರಾಗಿದ್ದ ಗ್ಯಾರೇಜ್ ರಾಜಣ್ಣ. ರವಿಗೆ ಸುಮಾರು ಮೂವತ್ತು ವರ್ಷ ಮತ್ತು ಗ್ಯಾರೇಜ್ ರಾಜಣ್ಣನ ಮಗಳಿಗೆ ಇಪ್ಪತ್ತೈದು. ಇದರ ಮುಂದಿನ ಕಥೆ ಎಲ್ಲರೂ ಊಹಿಸಿಕೊಂಡಂತೆಯೇ ಆಯಿತು. ರವಿ ಹೊಸಾ ಬಸ್ಸು ತೆಗೆದುಕೊಳ್ಳುವಷ್ಟರಲ್ಲಿ ರಿಪೇರಿಯು ಮನಸ್ಸುಗಳನ್ನು ಒಂದುಮಾಡಿ ಮದುವೆಯೂ ಆಯಿತು. 'ಇನ್ನೂ ಒಳ್ಳೇ ಹುಡ್ಗ ಸಿಕ್ತಿದ್ನೇನೋ ಹುಡ್ಕಿದ್ರೆ' ಎಂಬ ಯಾರದೋ ಮಾತಿಗೆ ರಾಜಣ್ಣನ ಉತ್ತರ ಮಾತ್ರ ಮಜವಾಗಿತ್ತು. ನಾನೂ ಸುಮಾರು ವರ್ಷದಿಂದ ನೋಡ್ತಿದ್ದೀನಿ, ಅವರಪ್ಪ ಅವನಿಗೆ ದಾಟಿಸಿ ಹೋದ ಹಳೇ ಗಾಡಿ ಅದು. ಹೊಸಾ ಬಸ್ಸು ತೆಗೆದುಕೊಂಡ ಮೇಲೂ ಅದನ್ನು ಮಾರಿರಲಿಲ್ಲ. ಗುಜರಿಗೆ ಹಾಕಿದ್ರೆ ಒಳ್ಳೇ ರೇಟು ಬರುತ್ತೆ ಕಣೋ ಎಂದು ನಾನು ಹೇಳಿದಾಗಲೆಲ್ಲಾ 'ನಾನ್ ಚಿಕ್ಕೋನಿದ್ದಾಗಿಂದ ನನ್ ಜೊತೇನೇ ಇದೆ, ಬಿಡಕ್ಕೆ ಮನಸ್ಸು ಬರ್ತಾ ಇಲ್ಲ, ಅಟ್ಯಾಚ್ ಆಗ್ಬಿಟ್ಟಿದ್ದೀನಿ' ಅಂತಿದ್ದ. ವಸ್ತುವಿನೊಂದಿಗೇ ಅಷ್ಟು ಬಾಂಧವ್ಯ ಬೆಳೆಸಿಕೊಂಡು ಬಿಡಲೊಲ್ಲದವನು ನನ್ನ ಮಗಳನ್ನು ಯಾವತ್ತಿಗೂ ಬೀದಿಪಾಲು ಮಾಡುವುದಿಲ್ಲ ಎಂಬ ನಂಬಿಕೆ ಬಂತು ಎಂದಿದ್ದರು!.

ರಿಪೇರಿಯು ಮನಸ್ಸುಗಳನ್ನು ಒಡೆದಿದ್ದು ಮಾತ್ರ ಸ್ವಲ್ಪ ವಿಚಿತ್ರ ಘಟನೆಯೇ. ಟೀವಿ ರೇಡಿಯೋ, ಟೇಪ್ ರೆಕಾರ್ಡರ್ ಹೀಗೆ ಎಲೆಕ್ಟ್ರಾನಿಕ್ ವಸ್ತುಗಳನ್ನೆಲ್ಲಾ ರಿಪೇರಿ ಮಾಡುತ್ತಿದ್ದ ಬಾಬು ನಮ್ಮೂರಿನಲ್ಲಿ 'ರೇಡಿಯೋ ಬಾಬು' ಎಂದೇ ಫೇಮಸ್ಸು. ರೇಡಿಯೋಗಳ ಪರ್ಯಾವಸಾನವಾದಮೇಲೂ ಈಗಲೂ ಅವನಿಗೆ ರೇಡಿಯೋ ಬಾಬು ಎಂದೇ ಕರೆಯುತ್ತಾರೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಒಳಗೆ ವಿಲೀನವಾದಮೇಲೂ, ಬೋರ್ಡು ಬದಲಾಯಿಸಿದಮೇಲೂ ಬೆಂಗಳೂರಿನಲ್ಲಿ ಇನ್ನೈವತ್ತು ವರ್ಷ ಕಳೆದರೂ 'ಮೈಸೂರು ಬ್ಯಾಂಕ್ ಸರ್ಕಲ್' ಮಾತ್ರ ಹಾಗೆಯೇ ಇರುತ್ತದಲ್ಲ, ನಮ್ಮ ರೇಡಿಯೋ ಬಾಬುವೂ ಹಾಗೆಯೇ. ಇಂತಹಾ ರೇಡಿಯೋ ಬಾಬುವಿಗೆ ತನ್ನ ಕೈಯಲ್ಲಿ ರಿಪೇರಿಯಾಗಲು ಸಾಧ್ಯವಾಗದ ಎಲೆಕ್ಟ್ರಾನಿಕ್ ವಸ್ತುವೊಂದು ಭೂಮಿಯ ಮೇಲೆ ಇರಲು ಸಾಧ್ಯವೇ ಇಲ್ಲ ಎನ್ನುವ ಜಂಭ. ಯಾರಾದರೂ ಪರಿಚಯಸ್ಥರು ಹೊಸಾ ಟಿವಿ, ಹೊಸಾ ವಾಶಿಂಗ್ ಮೆಶಿನ್ನು